***ನಂದಿ ಮಿತ್ರನ ಕಥೆ ನೋಟ್ಸ್***

ಶಿವಕೋಟ್ಯಾಚಾರ್ಯ

ಪಂಪಯುಗದಲ್ಲಿ ರಚಿತವಾದ ಒಂದೇ ಒಂದು ಗದ್ಯ ಗ್ರಂಥವೆಂದರೆ ''ವಡ್ಡಾರಾಧನೆ''. ಇದನ್ನು ರಚಿಸಿದವರು ಶಿವಕೋಟ್ಯಾಚಾರ್ಯ. ಇವರ ಕಾಲ ಸುಮಾರು ಕ್ರಿ.ಶ.೯೨೦ ರ ಸನಿಹದಲ್ಲಿದೆ. ಶ್ರೇಷ್ಠ ಜೈನ ಕವಿಯಾದ ಶಿವಕೋಟ್ಯಾಚಾರ್ಯರು ಹಳೆಗನ್ನಡದಲ್ಲಿ ಸುಂದರವಾದ ಗದ್ಯಕಾವ್ಯವನ್ನು ರಚಿಸಿದರು. ಈ ಕಥಾ ಗ್ರಂಥದಲ್ಲಿ ೧೯ ಮಹಾತ್ಮರ ಜೀವನ ಕಥೆಗಳಿವೆ. ಕಥಾಕೋಶವೆಂದೇ ಈ ಗ್ರಂಥ ಪ್ರಸಿದ್ಧವಾಗಿದೆ. ಈ ಕಾವ್ಯವು ೯ ನೇ ಶತಮಾನದ ನಂತರದಲ್ಲಿಯೇ ರಚಿತವಾಗಿರಬೇಕೆಂದು ವಿಮರ್ಶಕರು ತಿಳಿದಿದ್ದಾರೆ. ವಡ್ಡಾರಾಧನೆ ಎಂದರೆ ವೃದ್ಧರ, ಜ್ಞಾನಿಗಳ, ಜೈನ ಯತಿಗಳ ಜೀವನ ಸಾಧನೆಗಳಿಗೆ ಕೊಡುವ ಗೌರವವಾಗಿರುವದು. ಈ ವಡ್ಡಾರಾಧನೆಯ ಕಥೆಗಳಲ್ಲಿ ಜೀವ ತುಂಬಿದ ಶಿವಕೋಟ್ಯಾಚಾರ್ಯ ಬೇರೆ ಬೇರೆ ರೀತಿಯಿಂದ ಕಥೆಯನ್ನು ಹೇಳಿದ್ದಾರೆ. ನೀತಿ, ಚರಿತ್ರೆ, ಧರ್ಮ, ವ್ಯವಹಾರ ಹೀಗೆ ಹಲವು ವಿಷಯಗಳು ಈ ಕಥೆಗಳಲ್ಲಿವೆ. ಧಾರ್ಮಿಕ ಉದ್ದೇಶದಿಂದ ರಚಿತವಾದ ಈ ಕೃತಿ ಹಳೆಗನ್ನಡದ ಒಂದು ಉತ್ತಮ ಕೃತಿಯಾಗಿರುವುದು. ಇದು ಒಂದು ಅದ್ಭುತ ಗದ್ಯ ಕಾವ್ಯ.

'ವಡ್ಡಾರಾಧನೆ'ಯಲ್ಲಿ ೧೯ ಕಥೆಗಳಿವೆ. (.Pdf ನಂತೆ download ಮಾಡಲು ಕಥೆಯ ಮೇಲೆ ಕ್ಲಿಕ್ ಮಾಡಿ)

ಸುಕುಮಾರಸ್ವಾಮಿಯ ಕಥೆ

ಸುಕೌಶಳಸ್ವಾಮಿಯ ಕಥೆ

ಗಜಕುಮಾರನ ಕಥೆ

ಸನತ್ಕುಮಾರ ಚಕ್ರಚರ್ತಿಯ ಕಥೆ

ಅಣ್ಣಿಕಾಪುತ್ರನ ಕಥೆ

ಭದ್ರಬಾಹು ಭಟ್ಟಾರರ ಕಥೆ

ಲಲಿತಘಟೆಯ ಕಥೆ

ಧರ್ಮಘೋಷ ಭಟ್ಟಾರರ ಕಥೆ

ಸಿರಿದಣ್ಣ ಭಟ್ಟಾರರ ಕಥೆ

ವೃಷಭಸೇನ ಭಟ್ಟಾರರ ಕಥೆ

ಕಾರ್ತಿಕ ಋಷಿಯ ಕಥೆ

ಅಭಯಘೋಷ ಮುನಿಯ ಕಥೆ

ವಿದ್ಯುಚ್ಚೋರನ ಕಥೆ

ಗುರುದತ್ತ ಭಟ್ಟಾರರ ಕಥೆ

ಚಿಲಾತಪುತ್ರನ ಕಥೆ

ದಂಡಕನೆಂಬ ರಿಸಿಯ ಕಥೆ

ಮಹೇಂದ್ರದತ್ತಾಚಾರ್ಯನ ಕಥೆ

ಚಾಣಾಕ್ಯ ರಿಸಿಯ ಕಥೆ

ವೃಷಭಸೇನ ರಿಸಿಯ ಕಥೆ

[6/29, 11:07 PM] Mangala Bhoja☺: ಭದ್ರಬಾಹು ಕಥೆಯಲ್ಲಿ ಬರುವ ನಂದಿಮಿತ್ರನ ಕಥಾಸಾರ ಹೀಗಿದೆ:

ಅವಂತಿ ನಾಡಿನ ವೈದಿಶ ಪಟ್ಟಣವನ್ನು ಜಯವರ್ಮ – ಧಾರಿಣಿ ಆಳುತ್ತಿದ್ದರು. ಸಮೀಪದ ಪರಾಳಕೂಟವೆಂಬ ಊರಿನಲ್ಲಿ ದೇವಿಲ - ಪೃಥ್ವಿಶ್ರೀ ಎಂಬ ವರ್ತಕ ದಂಪತಿಗಳಿದ್ದರು. ಪೃಥ್ವಿಶ್ರೀ ಗರ್ಭವತಿಯಾಗುತ್ತಿದ್ದಂತೆ ಧನಕನಕ ಹಾಳಾಯಿತು. ಬಂಡಿಗಳಲ್ಲಿ ಸರಕು ಹೇರಿಕೊಂಡು ಮಾರಾಟಕ್ಕೆ ಹೊರಟರು. ದಾರಿಯಲ್ಲಿ ಕಳ್ಳರು ಎದುರಾಗಿ ದೇವಿಲನನ್ನು ಕೊಂದು ಲೂಟಿ ಮಾಡಿದರು. ಪೃಥ್ವಶ್ರೀ ಬೆಸಲೆಯಾದಳು. ಮಗುವಿಗೆ ನಂದಿಮಿತ್ರನೆಂದು ಹೆಸರಿಟ್ಟರು. ಮೂರು ತಿಂಗಳಲ್ಲಿ ತಾಯಿ ಸತ್ತಳು. ಮಗುವನ್ನು ಸಾಕಿದ ನೆಂಟರಿಷ್ಟರನ್ನೂ ಸಾವು ಬೇಟೆಯಾಡಿತು. ಊರಿನವರು ಸೇರಿ ತಬ್ಬಲಿಯನ್ನು ಊರಾಚೆ ಅಟ್ಟಿದರು. ನಂದಿಮಿತ್ರ ಊರೂರು ತಿರಿದು ತಿರುಪೆಯಿಂದ ಬೆಳೆದು ದೊಡ್ಡವನಾಗಿ ವಿದಿಶ ಪಟ್ಟಣಕ್ಕೆ ಬಂದ. ಕಾಷ್ಠಕೂಟನೆಂಬ ಕತ್ತಿಗೆಯವನು ಹೊರೆ ಹೊತ್ತು ಬರುತ್ತಾ ನಂದಿಮಿತ್ರನನ್ನು ಕಂಡ. ಇಬ್ಬರೂ ಒಂದೆಡೆ ನಿಂತರು. ಕಾಷ್ಠಕೂಟ ವಿಶ್ರಮಿಸಲು ಕಟ್ಟಿಗೆ ಹೊರೆಯನ್ನು ತಲೆಗೆ ಇಂಬಾಗಿರಿಸಿಕೊಂಡು. ನಂದಿಮಿತ್ರ ದೊಡ್ಡ ಬಂಡೆಯನ್ನು ಎತ್ತಿ ತಂದು ತಲೆಯಡಿಯಲ್ಲಿರಿಸಿ ಮಲಗಿದ. ಅವನ ಅದ್ಭುತ ಶಕ್ತಿಯಿಂದ ಅಚ್ಚರಿಗೊಂಡು ಕಾಷ್ಠಕೂಟ ಅವನನ್ನು ವಿಶ್ವಾಸದಿಂದ ವಿಚಾರಿಸಿದ. ಅವನು ನಿರ್ಗತಿಕನೆಂದು ತಿಳಿಯಿತು. ತನ್ನ ಮನೆಯಲ್ಲೇ ಕೆಲಸಕ್ಕಿರಿಸಿದ. ಕಾಷ್ಠಕೂಟ ಹೆಂಡತಿಗೆ 'ಇವನಿಗೆ ಎಂದಿಗೂ ಹೊಟ್ಟೆತುಂಬ ಬಡಿಸಬೇಡ. ಎಣ್ಣೆ ಹಾಕಬೇಡ ನೀರೆರೆಯಬೇಡ' ಎಂದು ಕಟ್ಟಪ್ಪಣೆ ಮಾಡಿದ. ಅದೇ ರೀತಿ ನಡೆಯಿತು. ನಿತ್ಯ ನಂದಿಮಿತ್ರ ಹತ್ತು ಜನರ ಹೊರೆ ಹೊತ್ತು ಬರುತ್ತಿದ್ದ. ಅದನ್ನು ಮಾರಿ ಕಾಷ್ಠಕೂಟ ಹಣವಂತನಾದ.

ಒಮ್ಮೆ ಕಾಷ್ಠಕೂಟನ ಹೆಂಡತಿ ಕರುಣೆಯಿಂದ ನಂದಿಮಿತ್ರನಿಗೆ ಹೊಟ್ಟೆತುಂಬ ಊಟ ಬಡಿಸಿದಳು. ಮರುದಿನ ಆತ ಕಾಷ್ಠಕೂಟನಿಗೆ 'ಅಯ್ಯಾ ನನಗೆ ಉಟ್ಟುಕೊಳ್ಳಲು ಬಟ್ಟೆ ತೆಗೆದುಕೊಡಿ' ಎಂದು ಕೇಳಿದ. ಕಾಷ್ಠಕೂಟ ಮನೆಗೆ ಬಂದು ಕೇಳಿದಾಅ, ಹೊಟ್ಟೆ ತುಂಬ ಊಟ ಬಡಿಸಿದ್ದು ತಿಳಿಯಿತು. ಕೋಪಿಸಿ ಅವಳಿಗೆ ಸಾಯಬಡಿದು ಮನೆಯಿಂದ ಅಟ್ಟಿದ. ನಂದಿಮಿತ್ರ ಅವಳ ಬಳಿ ಹೋಗಿ ಹೊಡಿದದ್ದು ಏಕೆಂದು ಕೇಳಿದ. 'ನಿನ್ನೆ ನಿನಗೆ ಹೊಟ್ಟೆ ತುಂಬ ಬಡಿಸಿದ್ದಕ್ಕೆ' ಎಂದಳು. 'ಹಾಗಾದರೆ ಇಂತಹ ಪರಮ ನೀಚರ ಮನೆಯಲ್ಲಿ ಮಾರಿ ಇರಲಿ' ಎಂದು ಹೇಳಿ ನಂದಿಮಿತ್ರ ಹೊರಟುಹೋದ. ತಾನೇ ಕಟ್ಟಿಗೆ ತಂದು ಮಾರಲು ಹೊರಟರೆ ಒಂದು ಹಣವೂ ಬರಲಿಲ್ಲ. ಅಂಬಲಿಗೂ ಎಣ್ಣೆಗೂ ಹಿಟ್ಟಿಗೂ ಕಟ್ಟಿಗೆ ಹಾಕಿ ಕಾಲ ನೂಕುತ್ತಿದ್ದ. ಒಮ್ಮೆ ಹೊರೆ ತರುತ್ತಿದ್ದ. ದಾರಿಯಲ್ಲಿ ಶಿವಗುಪ್ತಾಚಾರ್ಯರು ಪಾರಣೆಗಾಗಿ ಹೊರಟಿದ್ದರು. ನಂದಿಮಿತ್ರನಿಗೆ ಕುತೂಹಲವಾಯಿತು. ಕಟ್ಟಿಗೆ ಹೊರೆ ಬಿಟ್ಟು ಅವರ ಹಿಂದೆ ಹೊರಟ. ರಾಜನು ಅರಮನೆಯಲ್ಲಿ ಆ ಜೈನ ಮುನಿಗೆ ಆಹಾರ ಕೊಡಲು ಪ್ರಾರ್ಥಿಸಿದ. ಅವರ ಕಾಲಿಗೆ ನೀರು ಹಾಕಿದಳು. ರಾಜನೇ ಇವನ ಕಾಲು ತೊಳೆದ. ಚಿನ್ನದ ತಟ್ಟೆಯಲ್ಲಿ ಭಕ್ಷ್ಯ ಭೋಜ್ಯ ಬಡಿಸಿದರು. ತಾಂಬೂಲ ಕೊಟ್ಟರು. ಭಟಾರರು ಪಾಣಿಪಾತ್ರೆಯಲ್ಲಿ ಉಂಡು ಹೊರಟರು. ಇವನೂ ಹೊರಟ. ಬಸದಿಗೆ ಬಂದರು.

ನಂದಿಮಿತ್ರ 'ನಾನೂ ಇವರಂತೆ ಆದರೆ ನಿತ್ಯ ಊಟಕ್ಕೆ ಯೋಚನೆಯಿಲ್ಲ' ಎಂದು ಆಲೋಚಿಸಿದ. ಗುರುಗಳ ಅಳಿ ಬಂದಿ 'ನನ್ನನ್ನು ನಿಮ್ಮಂತೆ ಮಾಡಿ' ಎಂದು ಬೇಡಿದ. ಜೈನಗುರುಗಳು ದೀಕ್ಷೆ ಕೊಟ್ಟರು. ಈ ಸುದ್ದಿನಗರಕ್ಕೆ ತಲಪಿತು. ಹೊಸ ಬ್ರಹ್ಮಚಾರಿ ಸ್ವಾಮಿಗಳಿಗೆ ರಾಜನು ತಾನು ಮೊದಲನೆಯ ಆಹಾರ ಕೊಡಬೇಕೆಂದು ಹೋಗಿ ಬೇಡಿದ. ನಂದಿಮಿತ್ರನು 'ಸಾಮಂತ ಮಹಾ ಸಾಮಂತರಿಗೆ ಸ್ವಾಮಿಯಾದ ಈ ಮಹಾರಾಜನು ನನಗೆ ನಮಸ್ಕಾರ ಮಾಡುತ್ತಿದ್ದಾನೆ. ಇದೆಲ್ಲ ತಪಸ್ಸಿನ ಧರ್ಮದ ಫಲ. ಒಂದು ದಿನದ ತಪಕ್ಕೇ ಇಷ್ಟು ಫಲ ಪ್ರತ್ಯಕ್ಷವಾಗಿದೆ. ಇರಲಿ. ಇನ್ನೂ ಮುಂದೆ ನೋಡೋಣ ಎಂದು ಪರಿಭಾವಿಸಿ 'ನಾವು ಇಂದು ಉಪವಾಸ ಮಾಡಿದ್ದೇವೆ' ಎಂದು ರಾಜನಿಗೆ ತಿಳಿಸಿದ. ಮರುದಿನ ಮಹಾರಾಣಿ ಅಂತಃಪುರದ ಪರಿವಾರದೊಡನೆ ಬಂದು ಪ್ರಾರ್ಥಿಸಿದಳು. ನಂದಿಮಿತ್ರ ಅಂದೂ 'ಇದೆಲ್ಲಾ ತಪಸ್ಸಿನ ಫಲ. ಮುಂದೆ ಇನ್ನೂ ದೊಡ್ಡದಾಗಬಹುದು' ಎಂದು ಮನದಲ್ಲಿ ಅಂದುಕೊಂಡು 'ಅವ್ವಾ, ನಾವು ಇಂದೂ ಉಪವಾಸ ಮಾಡುತ್ತಿದ್ದೇವೆ' ಎಂಬುದಾಗಿ ಉತ್ತರವಿತ್ತು ರಾಣಿಯನ್ನೂ ಕಳಿಸಿಬಿಟ್ಟನು, ಮರುದಿನ ಬಂದ ಮಂತ್ರಿಗಳೂ, ಅದರ ಮಾರನೆಯ ದಿನ ಬಂದ ರಾಜಶ್ರೇಷ್ಠಿಗೂ ಆಯ್ದನೆಯ ದಿನ ಬಂದ ಯುವರಾಜನಿಗೂ ಇದೇ ಉತ್ತರ. ಹೀಗೆ ಆರು ದಿನ ಪಂಚನಮಸ್ಕಾರ ಧ್ಯಾನದಲ್ಲಿಯೇ ಕಳೆಯಿತು.

ಏಳನೆಯ ದಿನ ನಂದಿಮಿತ್ರನು 'ಭಟಾರ, ಇಷ್ಟು ಕಾಲ ಉಂಡದ್ದು ಸಾಕು. ಇನ್ನು ನನಗೆ ಯಾವಜ್ಜೀವವೂ ಉಪವಾಸ ದೀಕ್ಷೆ ಕೊಡಿ' ಎಂದು ಬೇಡಿದನು. ಭಟಾರರು 'ನೀವು ನಿಜವಾಗಿಯೂ ಮಹಾಪುರುಷರು. ನಿಮ್ಮಂತಹ ದೈರ್ಯವಂತರು, ಸತ್ಯವಂತರು ಇಲ್ಲ, ಇಷ್ಟು ಕಾಲದವರೆಗೆ ತಪಸ್ಸು ಮಾಡಿರುವ ಮನಗೂ ಈ ಧೈರ್ಯ ಸತ್ವ ಇಲ್ಲ' ಎಂದರು, ಮುಂದುವರಿದು 'ನಿಮಗೆ ಇದೊಂದು ದಿನ ಆಯುಷ್ಯವಿದೆ' ಎಂದು ಹೇಳಿ ಆಹಾರ ಶರೀರ ನಿವೃತ್ತಿ ದೀಕ್ಷೆ ಕೊಟ್ಟರು. ಬಸದಿಯಲ್ಲೊಂದು ಕೋಣೆ ತೋರಿಸಿ 'ಇಲ್ಲಿ ಒಂದು ಪಕ್ಕಕ್ಕೆ ಮಲಗಿ ಅಲುಗಾಡದೆ ಕೈಕಾಲು ಚಲಿಸದೆ ಜೀವವಿರುವವರೆಗೆ ಪಂಚನಮಸ್ಕಾರವನ್ನು ಮನಸ್ಸಿನಲ್ಲಿ ಹೇಳುತ್ತಾ ಇರಿ' ಎಂದು ಉಪದೇಶಿಸಿದರು. ನಂದಿಮಿತ್ರನು ಹಾಗೇ ಮಲಗಿದ. ಭಟಾರರು ಆರಾಧನೆಯನ್ನು ವ್ಯಾಖ್ಯಾನಿಸತೊಡಗಿದರು. ಸುದ್ದಿ ತಿಳಿದು ರಾಜಧಾನಿ ಸಮಸ್ತರೂ ಬಂದು ಸೇರಿದರು. ಸಂಜೆ ನಂದಿಮಿತ್ರ ದೇಹತ್ಯಾದ ಮಾಡಿದ. ಸೌಧರ್ಮಕಲ್ಪದಲ್ಲಿ ಕನಕಧ್ವಜದೇವನಾಗಿ ಹುಟ್ಟಿದ. ಇತ್ತ ಪೃಥ್ವಿಯಲ್ಲಿ ರಾಜ ರಾಣಿ ಮಂತ್ರಿಯರಾದಿಯಾಗಿ ಅವನ ಭೌತಿಕ ಶರೀರಕ್ಕೆ ಪೂಜೆ ಮಾಡುತ್ತಿದ್ದರು. ಕನಕಧ್ವಜದೇವನು ದೇವಲೋಕದ ಮಹಾವೈಭವ ಪರಿವಾರದೊಡನೆ ವಿಮಾನವೇರಿ ಅಲ್ಲಿಗೆ ಬಂದು ಅವರೊಡನೆ ತಾನೂ ತನ್ನ ದೇಹವನ್ನು ದೇವಪುಷ್ಪಗಳಿಂದ ಪೂಜಿಸಿದನು. ದೊರೆಗೆ ಅಚ್ಚರಿಯಾಗಿ ನೀವು ಯಾರು? ಎಂದು ಕೇಳಿದ. ಅದಕ್ಕೆ 'ನಾನೇ ನಂದಿಮಿತ್ರ. ಗುರುಗಳ ಪ್ರಸಾದದಿಂದ ಉಪವಾಸ ಮಹಿಮೆಯಿಂದ ಈ ದೇವತ್ವ ಪ್ರಾಪ್ತವಾಯಿತು', ಎಂದು ಹೇಳಿ ಭಟಾರರನ್ನೂ ಪೂಜಿಸಿ ಹೋದನು